APRIL 28, 2026

# AKASHAVANI - DHARWAD
## PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಮತ್ತು ಭಾರತ ಅಥ್ಲೆಟಿಕ್ಸ್ ಫೆಡರೇಶನ್ ಆಶ್ರಯದಲ್ಲಿ, ತುಮಕೂರಿನ, ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ, ಭಾನುವಾರ ಸಮಾರೋಪಗೊಂಡ, 24ನೇ ರಾಷ್ಟ್ರೀಯ ಕಿರಿಯರ, 20 ವರ್ಷ ವಯೋಮಿತಿಯ, ಅಥ್ಲೆಟಿಕ್ಸ್ ಕ್ರೀಡಾಕೂಟದ, ಮಹಿಳೆಯರ 800 ಮೀಟರ್ ಓಟದಲ್ಲಿ, ಯಾದಗಿರಿ ಜಿಲ್ಲೆ, ಶಹಾಪುರದ ನಾಗಿಣಿ ಯಂಕಪ್ಪ, ಚಿನ್ನದ ಪದಕ ಗಳಿಸಿದ್ದಾರೆ. 2 ದಶಾಂಶ 1–2 ಸೆಕೆಂದುಗಳಲ್ಲಿ ಅವರು ಗುರಿ ತಲುಪಿ, ಈ ಸಾಧನೆ ಮಾಡಿದರು.

<><><>

ಪ್ರಸ್ತುತ, ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ, ಡಾಕ್ಟರ್ ಎಂ. ಮೋಹನ ಆಳ್ವಾ ಅವರ, ಕ್ರೀಡಾಪಟು ದತ್ತು ಯೋಜನೆ ಅಡಿ ಆಯ್ಕೆಗೊಂಡು, ದ್ವಿತೀಯ ಪಿ.ಯು.ಸಿ. ಶಿಕ್ಷಣ ಹಾಗೂ ಕ್ರೀಡಾ ತರಬೇತಿಯನ್ನು, ನಾಗಿಣಿ ಉಚಿತವಾಗಿ ಪಡೆಯುತ್ತಿದ್ದಾರೆ. ಕಡು ಬಡತನದಲ್ಲಿ ಅರಳಿದ, ಗ್ರಾಮೀಣ ಕ್ರೀಡಾ ಪ್ರತಿಭೆ ನಾಗಿಣಿ ಅವರಿಗೆ, ತಂದೆ ಯಂಕಪ್ಪ ಹಾಗೂ ಇಡೀ ಕುಟುಂಬಕ್ಕೆ ಚುರುಮುರಿ ವ್ಯಾಪಾರವೇ, ಆಸರೆ.

<><><>

ಪ್ರದೇಶ ಸಮಾಚಾರಕ್ಕಾಗಿ, ಚಿನ್ನದ ಓಟಗಾರ್ತಿ ನಾಗಿಣಿ ಯಂಕಪ್ಪ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ನಾಗಿಣಿ ಯಂಕಪ್ಪ ಧ್ವನಿ 40 ಸೆಕೆಂದುಗಳು

<><><>

ಐ.ಪಿ.ಎಲ್. ಟಿ–20, ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಮಾದರಿಯಲ್ಲಿ, ಪ್ರಥಮ ಬಾರಿಗೆ, ವುಮೆನ್ಸ್ ಪ್ರೋ ಮಿನಿ ಫುಟ್‌ಬಾಲ್ ಲೀಗ್, ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಆಯೋಜಿಸಲಾಗುತ್ತಿದೆ ಎಂದು, ಭಾರತೀಯ ಮಹಿಳಾ ಫುಟ್‌ಬಾಲ್ ಸಂಘದ ಅಧ್ಯಕ್ಷ, ಮುಖೇಶ ಶರ್ಮಾ ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಜೂನ್ ತಿಂಗಳಲ್ಲಿ, ದೇಶದ 8 ಪ್ರಮುಖ ಕ್ಲಬ್‌ಗಳನ್ನು ಒಳಗೊಂಡ, ವಿಮೆನ್ಸ್ ಫುಟ್‌ಬಾಲ್ ಫೆಡರೇಷನ್ ಕಪ್ ಪಂದ್ಯಾವಳಿಯನ್ನು, ಲೀಗ್ ಕಮ್ ನಾಕ್ ಔಟ್ ಮಾದರಿಯಲ್ಲಿ ಆಯೋಜಿಸಲಾಗಿದೆ, ಎಂದರು.

<><><>

ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, ನಾಳೆ ಹಾಗೂ ನಾಡಿದ್ದು, ರಾಜ್ಯ ಮಟ್ಟದ ವಿಶೇಷ ಪ್ರದರ್ಶನ ಹಾಗೂ ವಿದ್ಯಾರ್ಥಿಗಳ ಆವಿಷ್ಕಾರ ಮಾದರಿ ಸ್ಪರ್ಧೆಯನ್ನು, ಬೆಂಗಳೂರಿನ, ದೊಡ್ಡ ಬೆಟ್ಟಹಳ್ಳಿಯ, ಮೇಜರ್ ಸಂದೀಪ ಉನ್ನಿಕೃಷ್ಣನ್ ಮಾರ್ಗದ, ದೂರ ಸಂವೇದಿ ಭವನದಲ್ಲಿ ಆಯೋಜಿಸಿದೆ. "ಭೂಮಿಯನ್ನು ನಿರ್ವಹಿಸುವ ತಂತ್ರಜ್ಞಾನಗಳು" ಎಂಬ ವಿಷಯದ ಬಗ್ಗೆ, ವಿದ್ಯಾರ್ಥಿಗಳ ನವೀನ ಮಾದರಿ ಸ್ಪರ್ಧೆ ನಡೆಯಲಿದೆ. ರಾಜ್ಯ ಮುಖ್ಯ ಕಾರ್ಯದರ್ಶಿ, ಡಾಕ್ಟರ್ ಶಾಲಿನಿ ರಜನೀಶ, ಸಮ್ಮೇಳನ ಉದ್ಘಾಟಿಸಲಿದ್ದಾರೆ.

<><><>

'ಕೆಲಸ ನಿರ್ವಹಿಸುವ ಸ್ಥಳದಲ್ಲಿ, ಉದ್ಯೋಗಿಗಳ ಸುರಕ್ಷತೆ ಮತ್ತು ಆರೋಗ್ಯ' ಕಾಪಾಡುವ, ವಿಶ್ವ ದಿನಾಚರಣೆ, ಇಂದು. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, 2003 ರಲ್ಲಿ ಮೊದಲ ಬಾರಿಗೆ, ಈ ದಿನವನ್ನು ಆಚರಿಸಿತು.

<><><>

ಎಲ್.ಕೆ.ಜಿ.ಯಿಂದ ಪಿ.ಯು.ಸಿ. ವರೆಗೆ, ಒಂದೇ ಆವರಣದಲ್ಲಿ, ಶಿಕ್ಷಣ ನೀಡುವ, ಕೆ.ಪಿ.ಎಸ್, ಕರ್ನಾಟಕ ಪಬ್ಲಿಕ್ ಶಾಲೆಗಳು, ಇಂದು ಪೋಷಕರ ನೆಚ್ಚಿನ ಶಾಲೆಗಳಾಗಿವೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ, ಮಧು ಬಂಗಾರಪ್ಪ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ವಿರುದ್ಧ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮುದಾಯದ ಸಹಭಾಗಿತ್ವ ಅಪೇಕ್ಷಿಸಿದ್ದು, ಮಕ್ಕಳ ಸಹಾಯವಾಣಿ ಸಂಖ್ಯೆ 1–0–9–8ಕ್ಕೆ ಕರೆ ಮಾಡಿ, ಸಾರ್ವಜನಿಕರು ದೂರು ದಾಖಲಿಸಬಹುದು.

<><><>

ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದು, ಕೊಲ್ಲೂರಿನ ಶ್ರೀ ಮೂಕಾಂಬಿಕಾ ದೇವಾಲಯಕ್ಕೆ ಇಂದು ಬೆಳಗ್ಗೆ ಭೇಟಿ ನೀಡಿ, ದರ್ಶನ ಪಡೆದರು. ಇಂದು ಮಧ್ಯಾಹ್ನ 3.30ಕ್ಕೆ ಮಂಗಳೂರು ದೇರಳಕಟ್ಟೆಯ, ಕೆ.ಎಸ್.ಹೆಗ್ಡೆ ಕ್ಷೇಮ ಸಭಾಂಗಣದಲ್ಲಿ, 'ವಿಕಸಿತ ಭಾರತ–2047: ಒಂದು ದೃಷ್ಟಿಕೋನ' ವಿಷಯವಾಗಿ, ನಿಟ್ಟೆ ವಿನಯ್ ಹೆಗ್ಡೆ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ.

<><><>

ರಾಜ್ಯಾದ್ಯಂತ ಈ ವರೆಗೆ, 684 ಕೋಟಿ ಬಾರಿ ಮಹಿಳೆಯರು, ಬಸ್‌ಗಳಲ್ಲಿ ಉಚಿತ ಪ್ರಯಾಣ ಕೈಗೊಂಡಿದ್ದಾರೆ. ರಾಜ್ಯದ ಎಲ್ಲ ಸಾರಿಗೆ ನಿಗಮಗಳಿಗೆ, ಒಟ್ಟು 17 ಸಾವಿರದ 743 ಕೋಟಿ ರೂಪಾಯಿ ವೆಚ್ಚವಾಗಿದೆ. ಯೋಜನೆಯ ಅನುಷ್ಠಾನಕ್ಕಾಗಿ, 2026–27ನೇ ಸಾಲಿಗೆ 5 ಸಾವಿರದ 300 ಕೋಟಿ ರೂಪಾಯಿ ಅನುದಾನ, ಬಿಡುಗಡೆಯಾಗಿದೆ.

<><><>

ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ, ಸಂತೋಷ್ ಲಾಡ ಅವರು, ಇಂದು ಬೆಳಗ್ಗೆ 11 ಗಂಟೆಯಿಂದ, ಕುಂದಗೋಳದ ಸವಾಯಿ ಗಂಧರ್ವ ಸ್ಮಾರಕ ಭವನದಲ್ಲಿ, ಜಿಲ್ಲಾ ಮಟ್ಟದ ಜನ ಸಂಪರ್ಕ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಸಚಿವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುತ್ತಿದ್ದಾರೆ.

<><><>

ಮುಂಬರುವ 7 ದಿನಗಳಲ್ಲಿ, ರಾಜ್ಯಾದ್ಯಂತ, ಅಲ್ಲಲ್ಲಿ ಗುಡುಗು, ಸಿಡಿಲು ಸಹಿತ, ಜೋರಾದ ಗಾಳಿಯೊಂದಿಗೆ, ಹಗುರ ಮಳೆ ಹಾಗೂ ಉತ್ತರ ಒಳನಾಡು ಜಿಲ್ಲೆಗಳಲ್ಲಿ, ಇಂದಿನಿಂದ ನಾಡಿದ್ದು 30ರ ವರೆಗೆ ಹಾಗೂ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ, ನಾಳೆ ಮತ್ತು ನಾಡಿದ್ದು, ಅಲ್ಲಲ್ಲಿ ಆಲಿಕಲ್ಲು ಮಳೆಯಾಗುವ ಸಾಧ್ಯತೆ ಇದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.